Relief given by Government to victims of fire accident in Mulbagal Town.

Q.—Sri M. V. KRISHNAPPA (Kolar District—General).—Will the Government be pleased to state :—

(a) the number of houses that were burnt in Mulbagal Town belonging to the Harijans on Saturday ;

(b) the loss estimated ;

(c) the help given by Government?

A.—The Hon'ble Sri H. SIDDAIYA (Minister for Revenue and Excise).—

(a) 19.

(b) Rs. 4,390.

(c) Relief to the extent of Rs. 175 has already been given. Reports from local officers are awaited for granting further relief.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮುಳುಬಾಗಿಲು ನಲ್ಲಿ ಸುಟ್ಟುಹೋದ ಹರಿಜನರ ಮನೆಗಳು 19 ಎಂದು ಉತ್ತರ ಕೊಡಲಾಗಿದೆ. ಹಾಗೆ ಬೆಂಕಿ ಬೀಳಲು ಕಾರಣವೇನೆಂಬುದನ್ನು ತಿಳಿಸುವಿರಾ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ 'ಆಕಸ್ಮಿಕ ಬೆಂಕಿ ಅನಾಹುತದಿಂದ' ಎಂದು ಅಷ್ಟೆ ತಿಳಿಸಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಬಗ್ಗೆ ಸರ್ಕಾರದವರು ಅವರಿಗೆ ಏನು ಸಹಾಯಮಾಡಿದ್ದಾರೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—175 ರೂಪಾಯಿಗಳ ಗ್ರಾಂಟನ್ನು ಕೊಟ್ಟು ಸಹಾಯ ಮಾಡಲಾಗಿದೆ. ಸಾಧ್ಯವಾದಷ್ಟು ಬೇಗ ಇನ್ನೂ ಸಾಧ್ಯವಾಗತಕ್ಕ ಸಹಾಯಗಳನ್ನೆಲ್ಲಾ ಒದಗಿಸಲಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸರ್ಕಾರದವರು ನೀಡಿರತಕ್ಕ ಸಹಾಯವೇನು ಸ್ಥಳೀಯ ಅಧಿಕಾರಿಗಳಿಂದ ಚಂದಾ ವಸೂಲು ಮಾಡಿದ ಹಣವೇ!

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ವಜನಿಕರ ಹಣ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹೀಗೆ ಮನೆಗಳು ಬೆಂದು ಹೋದ ಸಂದರ್ಭದಲ್ಲಿ ಸರ್ಕಾರದವರು ತಾತ್ಕಾಲಿಕವಾಗಿ ಕೊಡತಕ್ಕ ಪರಿಹಾರದ ಬಗ್ಗೆ ಯಾವ ಒಂದು ನಿಗದಿಯೂ ಇಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಲ್ಲಿ ಜನರಿಗೆ ಉಂಟಾಗಿರತಕ್ಕ ಲಾಸ್ಸಿನ ಆಧಾರದ ಮೇಲೆ ಸೇಕಡ 5 ರಿಂದ ಪೊದಲಗೊಂಡು 10ರ ತನಕ ಸಹಾಯ ನೀಡುವುದು, ಎಂದು ಒಂದು ನಿಯಮವಿದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗೆ ಮನೆಗಳು ಬೆಂದು ಹೋದವೆಂಬುದಾಗಿ ತಮಗೆ ವರದಿ ಬಂದ ಮೇಲೆ ಯಾರು ಯಾರು ಮನೆಗಳನ್ನು ಕಳೆದುಕೊಂಡಿರುತ್ತಾರೋ ಅಂಥಾವರಿಗೆಲ್ಲಾ, ಪ್ರತಿಯೊಂದು ಸಂಸಾರಕ್ಕೂ 15 ರೂಪಾಯಿಗಳನ್ನು ಕೊಡಬೇಕೆಂಬ ನಿಯಮಾಧಾರ ಉಂಟೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಉಂಟು.

ಶ್ರೀ ಎಚ್. ಕೆ. ವೀರಣ್ಣಗೌಡರು.—ಸ್ಥಳೀಯ ಅಧಿಕಾರಿಗಳು ಅಂದರೆ ಅದು ತಾಲ್ಲೂಕಾಗಿದ್ದರೆ ಅಲ್ಲಿರುವ ಅಮಲ್ದಾರರು, ಅಥವಾ ಜಿಲ್ಲಾ ಕಸಬೆಯಾಗಿದ್ದರೆ ಅಲ್ಲಿರತಕ್ಕ ಜಿಲ್ಲಾಧಿಕಾರಿಗಳು ಹಾಗೆ ಬೆಂಕಿಯಿಂದ ಮನೆಗಳನ್ನು ಸುಟ್ಟುಕೊಂಡವರಿಗೆ ಪರಿಹಾರ ಒದಗಿಸಿದ್ದಾರೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಟ್ಟಿಲ್ಲ. ಆದರೆ ಸರಿಯಾಗಿ ಗೊತ್ತಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹೀಗೆ ನಿಧಾನವಾಗಲು ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ವರದಿ ನನಗೆ ಬಂದಿರತಕ್ಕದ್ದು 17-3-51 ರಲ್ಲಿ. ಆದರೆ ಅಲ್ಲಿಂದೀಚೆಗೆ ಸಹಾಯ ನೀಡಿದ್ದರೂ ನೀಡಿರಬಹುದು. ಆ ಬಗ್ಗೆ ನನಗೆ ಸರಿಯಾದ ವರ್ತಮಾನವನ್ನೂ ಬಂದಿಲ್ಲ. ಆದರೆ ಈ ಬಗ್ಗೆ ನಾನಾಗಲೇ ತಿಳಿಸಿರುವಂತೆ ಅನೇಕ ಸಂಸ್ಥೆಗಳವರು ಉದಾರವಾಗಿ ನೀಡಿರತಕ್ಕ ಧನ ಸಹಾಯದಿಂದ ಬಂದ ಹಣಕ್ಕೆ ಸರ್ಕಾರದವರೂ ಕೂಡ ಸ್ವಲ್ಪ ಹಣ ಸಹಾಯವನ್ನು ತತ್ಕ್ಷಣವೇ ನೀಡಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಸ್ಥಳೀಯ ಅಧಿಕಾರಿಗಳಿಂದ ವರದಿ ಬರಬೇಕಾದರೆ ಎಷ್ಟು ದಿವಸಗಳು ಬೇಕಾಗುತ್ತದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—10-12 ದಿವಸಗಳಾಗಬಹುದು.

ಶ್ರೀ ಎಚ್. ಕೆ. ವೀರಣ್ಣಗೌಡರು.—ಇವರಿಗೆ ಆದಷ್ಟು ಬೇಗ ಹೆಚ್ಚಿನ ಪರಿಹಾರವನ್ನೊದಗಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸ್ಥಳೀಯ ಅಧಿಕಾರಿಗಳು ತನಿಖೆ ಮಾಡಿ ಆದಷ್ಟು ಬೇಗ ಸಹಾಯಗಳನ್ನು ಒದಗಿಸುತ್ತಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗೆ ಸಹಾಯ ಒದಗುತ್ತಿದೆಯೆಂದು ಭಾವಿಸಿ ತಾವು ಉತ್ತರ ಹೇಳುತ್ತಿದ್ದೀರೋ ಅಥವಾ ಹಾಗೆ ಒದಗುತ್ತಿರುವ ಸಹಾಯಗಳ ಬಗ್ಗೆ ವರದಿಯೇನಾದರೂ ಬಂದಿದೆಯೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವರದಿ ಮಾಡುತ್ತಿದ್ದಾರೆ. ಅದರ ಆಧಾರದ ಮೇಲೆ ತಿಳಿಸಲಾಗಿದೆ.

Sri H. C. LINGA REDDY (Kolar District-General).—Is there any loss of life in this accident ?

The Hon'ble Sri H. SIDDAIYA.—There was no loss of human life, but one bullock, one lamb and eight fowls were burnt to death.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅವರಿಗೆ ಇರುವುದಕ್ಕೇನಾದರೂ ಮನೆಗಳ ಸ್ಕೀಯ್ಯವನ್ನು ಒದಗಿಸಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕ್ರಮ ಕ್ರಮೇಣ ಎಲ್ಲವನ್ನೂ ಒದಗಿಸಿ ಕೊಡುತ್ತಾರೆ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ತಾವು ತಿಳಿಸಲಾದ ಪರಿಹಾರದ ದ್ರವ್ಯ 15 ರೂಪಾಯಿಗಳನ್ನು 100 ರೂಪಾಯಿಗಳಿಗೆ ಏರಿಸಲಾಗುತ್ತದೆಯೇ!

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಂಗಾಮಿಯಾಗಿ ಎಲ್ಲಿನ ತನಕ ಕೊಡಬಹುದೆಂದಿದೆಯೋ ಅಷ್ಟನ್ನು ಮಾತ್ರ ಕೊಡಬಹುದೆಂದು ಹೇಳಲಾಗಿದೆ.

ಶ್ರೀ ಜಿ. ನಾರಾಯಣಗೌಡರು.—ಈ 15 ರೂಪಾಯಿಗಳ ದ್ರವ್ಯ ಸಹಾಯದಿಂದೇನು ಫಲವಾಗಬಹುದು!

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾತ್ಕಾಲಿಕವಾಗಿ ಕೊಡತಕ್ಕ ಸಹಾಯವೇನೆಂದು ಕೇಳಿದೆ. ಆದಕ್ಕೆ ಉತ್ತರಕೊಡಲಾಗಿದೆ.

ಶ್ರೀ ಜಿ. ನಾರಾಯಣಗೌಡರು.—ಈ ಬೆಂಕಿ ಅನಾಹುತಕ್ಕೊಳಗಾದವರಿಗೆ ಕೂಡಲೆ ಸ್ಥಳೀಯ ಅಧಿಕಾರಿಗಳು ಅನುಕೂಲ ಕಲ್ಪಿಸಿಕೊಡತಕ್ಕದ್ದು ಅವರ ಕರ್ತವ್ಯ ವಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಮನೆಗಳನ್ನು ಸುಟ್ಟುಕೊಂಡವರಿಗೆ ತಾವು ಏನೇನು ಪರಿಹಾರಗಳನ್ನು ನೀಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು. ಮನೆ ಕಟ್ಟಿಕೊಳ್ಳಲು ಮರಮುಟ್ಟುಗಳನ್ನೂ ಮತ್ತು ಅಷ್ಟೇ ಅಲ್ಲದೆ ಅನೇಕ ಸಂದರ್ಭಗಳಲ್ಲಿ ದ್ರವ್ಯ ಸಹಾಯವನ್ನೂ ಕೂಡ ಕೊಡಲಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಸಹಾಯಗಳನ್ನು ತಾವು ಎಷ್ಟು ದಿನಗಳಲ್ಲಿ ಒದಗಿಸಿಕೊಡುತ್ತೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆದಷ್ಟು ಬೇಗ.

ಶ್ರೀ ಕಡಿದಾಳ್ ಮಂಜಪ್ಪನವರು.—ಅಂದರೆ ಎಷ್ಟು ಬೇಗ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸುಮಾರು ಒಂದು ವಾರದೊಳಗಾಗಿ ಒದಗಿಸುತ್ತಾರೆ. ಆದರೆ ಸ್ಥಳೀಯ ವಿಚಾರಣೆ ಎಷ್ಟು ಬೇಗ ಮುಗಿಯುತ್ತದೋ. ಆ ದಾಮಾಷಾದಲ್ಲಿ ಜನರಿಗೆ ಸಹಾಯಗಳನ್ನು ನೀಡುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಅವರಿಗೆ ಮನೆ ಕಟ್ಟಿಕೊಳ್ಳಲು ಮರಮುಟ್ಟುಗಳನ್ನು ಕೊಡಲಾಗುತ್ತದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಡುತ್ತಾರೆಂದು ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಬೆಂಕಿ ಅನಾಹುತದ ಬಗ್ಗೆ ಸಹಾಯ ನೀಡಲು ಪ್ರತಿಯೊಂದು ತಾಲ್ಲೂಕಿಗೂ ಇಷ್ಟಿಷ್ಟೆಂದು ಹೇಳಿ ಏನಾದರೂ ಮೊಬಲಗನ್ನು ತೆಗೆದಿಟ್ಟಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ಈ ಬಾಬತ್ತಿಗಾಗಿ ಬಜೆಟ್ಟಿನಲ್ಲಿ 'ಫ್ಯಾಮಿಲಿ ರಿಲೀಫ್ ಫಂಡಿನಿಂದ' ಒದಗಿಸಲಾಗುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇದರ ಕನಿಷ್ಟ ಪರಿಮಿತಿಯೇನು ಸ್ವಾಮಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಲೆ ಶ್ರೀಮಾನ್ ವೀರಣ್ಣಗೌಡರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದ್ದೇನೆ.

ಶ್ರೀ ಎಂ. ಎರ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಈ ಬಗ್ಗೆ ಪರಿಹಾರ ಕೊಡಲು ಎಷ್ಟು ದಿವಸಗಳೆಂದು ನಿರ್ಧರ ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಲೇ ಉತ್ತರ ಕೊಡಲಾಗಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಬಗ್ಗೆ ಪರಿಹಾರ ದೊರೆಯದ ಹಳ್ಳಿಯ ಕೇಸುಗಳೇನಾದರೂ ಉಂಟೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಒಂದು ವರ್ಷದ ಅವಧಿಯಲ್ಲಿ ಎಷ್ಟು ಕಡೆ ಬೆಂಕಿ ಬಿದ್ದಿರುವ ನಿದರ್ಶನಗಳು ಲೆಕ್ಕಕ್ಕೆ ಬಂದಿವೆ ? ಮತ್ತು ಆ ಬಗ್ಗೆ ತಾವೆಷ್ಟು ಸಹಾಯ ನೀಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು 80 ನಿದರ್ಶನಗಳು ಲೆಕ್ಕಕ್ಕೆ ಬಂದಿದೆ. 37½ ಸಾವಿರ cash grant ಕೊಡಲಾಗಿದೆ.

Mr. SPEAKER.—Question time over.

UNSTARRED QUESTIONS

(to which answers were laid on the table.)

(A) Starred Questions treated as unstarred.

Estimates for Water Supply to Malavalli Taluk.

*Q.—**140.** Sri M. C. VENKATESHAN (Mandya District—Depressed Class).—

Will the Government be pleased to state :—

(a) whether the water supply estimate of Malavalli Town is approved by them ;

(b) if not, the stage at which the record is pending ?

A.—**The Hon'ble Sri R. CHENNIGARAMIAH** (Minister for Local Self-Government).—

(a) No.

(b) The estimate for Rs. 6,61,800 has been referred to the Chief Engineer for scrutiny.

Estimates for Tarring the main roads of Malavalli Town.

*Q.—**141.** Sri M. C. VENKATESHAN (Mandya District—Depressed Class).—

Will the Government be pleased to state :—

(a) whether any representation is received by the Deputy Commissioner, Mandya, or by the Government regarding tarring the main roads of Malavalli Town ;

(b) if so, the stage at which the record is pending ?

A.—**The Hon'ble Sri R. CHENNIGARAMIAH** (Minister for Local Self-Government).—

(a) Yes.

(b) An estimate is under preparation by the Public Works Department.